**CC 1207/2017**
**PW.6**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

**ದೊಡ್ಡಬಳ್ಳಾಪುರ**

**ಸಿ ಸಿ ನಂ : 1207/2017**

**ಪಿ ಡಬ್ಲೂ - 4**

**ಸಿ ಡಬ್ಲೂ- 6**

**ದಿಃ 22.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಡಾಃ ಸತ್ಯನಾರಾಯಣ**

**ತಂದೆಯ ಹೆಸರು ಃ ವೆಂಕಟರಾಮಯ್ಯ**

**ವಯಸ್ಸು ಃ 58 ವರ್ಷ**

**ಉದ್ಯೋಗ ಃ ಪಶು ವೈದ್ಯರು**

**ವಿಳಾಸ ಃ ಚಿಕ್ಕಬಳ್ಳಾಪುರ**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ನಾನು 2010 ರಿಂದ 2025 ರವರೆಗೂ ದೊಡ್ಡಬೆಳವಂಗಲ ಪಶು ಚಿಕಿತ್ಸಾಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 05.12.2015 ರಂದು ಹಸುವಿನ ಮರಣೋತ್ತರ ಪರೀಕ್ಷೆಯನ್ನು ಮಾಡಿ ವರದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ಮರಣೋತ್ತರ ಪರೀಕ್ಷಾ ವರದಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ವರದಿಯನ್ನು ನಿಪಿ-4 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ.ಜಿ., ವಕೀಲರಿಂದ**

ಸಾಮಾನ್ಯವಾಗಿ ಹಸುವು 20 ಅಡಿ ಅಂತರದಲ್ಲಿ ಕಾಲು ಜಾರಿ ಬಿದ್ದು ಪೆಟ್ಟಾಗಿ ಸಾವು ಸಂಭವಿಸಬಹುದು ಎಂದರೆ ಸರಿ. ನಿಪಿ-4 ರಲ್ಲಿ ರಸ್ತೆಯ ಅಪಘಾತದಿಂದಲೇ ಸಾವು ಸಂಭವಿಸಿದೆ ಎಂದು ನಮೂದಿಸಿದೆ ಎಂದರೆ ಸರಿ. ಚಾಸಾ-1 ರವರಿಗೆ ಪರಿಹಾರ ಕೊಡಿಸುವ ಸಲುವಾಗಿ ಸುಳ್ಳು ಮರಣೋತ್ತರ ಪರೀಕ್ಷಾ ವರದಿಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯಾ ಬೆರಳಚ್ಚುಗಾರರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**